**ಡಿ.ಡಬ್ಲ್ಯು-01 - ಎಲ್. ಮಹೇಂದ್ರನಾಥ್**

**ಸಾಕ್ಷಿಯನ್ನು ದಿನಾಂಕಃ 24.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಪಿರ್ಯಾದುದಾರರ ಪರ ಶ್ರೀ. ಎಂ.ಎನ್.ಆರ್. ವಕೀಲರಿಂದಃ**

ಪಿರ್ಯಾದಿ ನನಗೆ ಕಳೆದ ಸುಮಾರು 35 ವರ್ಷಗಳಿಂದ ಪರಿಚಿತರು. ನಾನು ಹಾಗು ಪಿರ್ಯಾದಿ ಒಂದೇ ಊರಿನವರು. ನಾನು ಎಂ.ಎ. ಪದವಿ ವ್ಯಾಸಂಗ ಮಾಡಿರುತ್ತೇನೆ. ಯಾವುದೇ ವ್ಯವಹಾರ ಮಾಡುವ ಪೂರ್ವದಲ್ಲಿ ಅದರ ಬಗ್ಗೆ ತಿಳಿದು ನೋಡಿಕೊಂಡು ವ್ಯವಹಾರ ಮಾಡುತ್ತೇನೆಂದರೆ ಸರಿ. ನಿ.ಪಿ.-1 ಚೆಕ್ಕು ನನ್ನ ಖಾತೆಗೆ ಸೇರಿದ ಚೆಕ್ಕು ಎಂದರೆ ಸರಿ ಮತ್ತು ಅದರಲ್ಲಿರುವ ಸಹಿ ನನ್ನದೇ ಎಂದರೆ ಸರಿ. ಸದರಿ ನಿ.ಪಿ.-1 ಚೆಕ್ ನ ವ್ಯವಹಾರವನ್ನು ನಾನು ಪಿರ್ಯಾದಿಯ ಜೊತೆ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ. ನಾನು ನಿ.ಪಿ.-1 - ರೂ. 5,00,000/- ಗಳ ಚೆಕ್ ಅನ್ನು ಪಿರ್ಯಾದಿಗೆ ನೀಡಿರುತ್ತೇನೆಂದರೆ ಸರಿಯಲ್ಲ. ನನ್ನ ಹಾಗು ಎನ್.ಎಸ್. ರಾಮುರವರ ನಡುವೆ ಯಾವುದೇ ಕ್ರಯದ ಒಪ್ಪಂದ ಕರಾರು ಆಗಿರುವುದಿಲ್ಲ. ಪಿರ್ಯಾದಿ ನಿ.ಪಿ.-1 ಚೆಕ್ ಅನ್ನು ದುರುಪಯೋಗಪಡಿಸಿಕೊಂಡಿದ್ದಾರೆಂಬ ಬಗ್ಗೆ ಪೋಲೀಸರಿಗೆ ಯಾವುದೇ ದೂರನ್ನು ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ 2019 ನೇ ಇಸವಿಯ ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ನನ್ನ ಅಣ್ಣನಾದ ತಾಂಡವಮೂರ್ತಿಯವರಿಗೆ ಅವರ ಮಕ್ಕಳ ವಿದ್ಯಾಭ್ಯಾಸ ಹಾಗು ವ್ಯವಸಾಯದ ಸಂಬಂಧ ರೂ. 5,00,000/- ಸಾಲದ ಅವಶ್ಯಕತೆ ಇದ್ದಿದ್ದಾಗಿ ನನ್ನಲ್ಲಿ ತಿಳಿಸಿರುವುದಾಗಿ ತಿಳಿಸಿದ್ದು ಅದು ಯಾವ ದಿನಾಂಕ ಎಂದು ನನಗೆ ಗೊತ್ತಿರುವುದಿಲ್ಲ. ನಾನು ನನ್ನ ಸಹೋದರನಾದ ತಾಂಡವಮೂರ್ತಿ ಹಾಗು ಇತರ ಸಹೋದರರು ಪ್ರತ್ಯೇಕವಾಗಿ ವಾಸಮಾಡಿಕೊಂಡಿರುತ್ತೇವೆಂದರೆ ಸರಿ. ಅಲ್ಲದೇ

ಸಹೋದರರಾದ ನಾವುಗಳು ನಮ್ಮ ವ್ಯವಹಾರಗಳನ್ನು ಪ್ರತ್ಯೇಕವಾಗಿ ಮಾಡುತ್ತೇವೆಂದರೆ ಸರಿ. ಆ ಕಾರಣಕ್ಕಾಗಿ ನಾನು ಮಾಡಿದ ವ್ಯವಹಾರ ಅವರಿಗೆ ಗೊತ್ತಿರುವುದಿಲ್ಲ ಹಾಗು ಅವರು ಮಾಡಿದ ವ್ಯವಹಾರ ನನಗೆ ಗೊತ್ತಿರುವುದಿಲ್ಲವೆಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ಸಹೋದರನಾದ ತಾಂಡವಮೂರ್ತಿಯವರು ರೂ. 5,00,000/- ಸಾಲ ಬೇಕೆಂಬ ವಿಚಾರವನ್ನು ನನ್ನಲ್ಲಿ ತಿಳಿಸಿರುತ್ತಾರೆಂದು ನುಡಿಯುತ್ತಾರೆ. ನನ್ನ ಸಹೋದರನಾದ ತಾಂಡವಮೂರ್ತಿ ಬಿ.ಇ. ವ್ಯಾಸಂಗ ಮಾಡಿರುತ್ತಾರೆ. ಅವರಿಗೆ ಪ್ರತ್ಯೇಕವಾದ ಜಮೀನು ವಗೈರೆ ಇರುತ್ತದೆಂದರೆ ಸರಿ. ಅದೇ ರೀತಿ ನನ್ನ ಸಹೋದರನಾದ ತಾಂಡವಮೂರ್ತಿಗೆ ಪ್ರತ್ಯೇಕವಾದ ಬ್ಯಾಂಕ್ ಖಾತೆ ಇರುತ್ತದೆಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಸಹೋದರನಾದ ತಾಂಡಮೂರ್ತಿಯವರಿಗೆ ಪಿರ್ಯಾದಿಯ ಪರಿಚಯವಿರುತ್ತದೆ. ಪಿರ್ಯಾದುದಾರರು ಹಾಗು ಅವರ ಕುಟುಂಬದವರು ಹಾಗು ನಾವು ಮತ್ತು ನಮ್ಮ ಕುಟುಂಬದವರು ಒಂದೇ ಊರಿನವರಾದ್ದರಿಂದ ಯಾರ್ಯಾರು ಯಾವ ವ್ಯವಹಾರವನ್ನು ಮಾಡುತ್ತಾರೆಂದು ಗೊತ್ತಿರುತ್ತದೆಂದರೆ ಸರಿ. ನನ್ನ ಸಹೋದರನಾದ ತಾಂಡವಮೂರ್ತಿಯವರಿಗೆ ಏನು ವ್ಯವಹಾರ ಮಾಡಬೇಕು ಎಂದು ಗೊತ್ತಿರುತ್ತದೆಂದರೆ ಸಾಕ್ಷಿಯು ಸ್ಥಳೀಯವಾಗಿ ಏನು ಗೊತ್ತಿರುವುದಿಲ್ಲವೆಂದು ನುಡಿಯುತ್ತಾರೆ. ನಾನು ಊರಿನಲ್ಲಿ ವ್ಯವಹಾರ ಮಾಡುವಾಗ ಎಲ್ಲರಿಗೂ ಚೆಕ್ಕು ವಗೈರೆ ನೀಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಪಿರ್ಯಾದಿಯ ತಂದೆ ಬಡ್ಡಿ ವ್ಯವಹಾರ ಮಾಡುತ್ತಿದ್ದರು ಎಂದು ಹೇಳಲಾದ ವಿಚಾರದ ಸಂಬಂಧ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ನನ್ನ ಅಣ್ಣನಾದ ತಾಂಡವಮೂರ್ತಿಯವರಿಗೆ

ಸಾಲ ಕೊಡಿಸುವ ಸಂಬಂಧ ನಾನು ಸಿದ್ದರಾಮೇಗೌಡರವರನ್ನು 2019 ನೇ ಇಸವಿಯ ಮಾರ್ಚ್ ತಿಂಗಳಲ್ಲಿ ಭೇಟಿಯಾಗಿರುತ್ತೇನೆ ಆದರೆ ಯಾವ ದಿನಾಂಕ ಎಂದು ನೆನಪಿರುವುದಿಲ್ಲ. ಸದರಿ ವ್ಯವಹಾರದ ದಿನಾಂಕವನ್ನು ನಾನು ನನ್ನ ಯಾವುದೇ ಡೈರಿಯಲ್ಲಿಯೂ ಸಹ ನಮೂದಿಸಿರುವುದಿಲ್ಲ. ಸದರಿ ಸಿದ್ದರಾಮೇಗೌಡರವರು ನನ್ನ ಸಹೋದರನಾದ ತಾಂಡವಮೂರ್ತಿಯವರಿಗೆ ದಿನಾಂಕಃ 17.06.2019 ರಂದು ರೂ. 5,00,000/- ಸಾಲ ನೀಡಿರುತ್ತಾರೆ. ಆ ರೀತಿ ಸಿದ್ದರಾಮೇಗೌಡರವರು ನನ್ನ ಸಹೋದರನಾದ ತಾಂಡವಮೂರ್ತಿಯವರಿಗೆ ದಿನಾಂಕಃ 17.06.2019 ರಂದು ರೂ. 5,00,000/- ಸಾಲ ನೀಡಿದ ಬಗ್ಗೆ ದಾಖಲೆ ಹಾಜರುಪಡಿಸಿರುತ್ತೇನೆ. ಸದರಿ ಹಣದ ವ್ಯವಹಾರದ ಸಮಯದಲ್ಲಿ ನಾನು, ನನ್ನ ಸಹೋದರರಾದ ತಾಂಡವಮೂರ್ತಿ, ಎಲ್. ಅನಂತಮೂರ್ತಿ, ಸುರೇಶ್ ಮತ್ತು ಎನ್.ಎಸ್. ರಾಮುರವರು ಇದ್ದಿರುತ್ತಾರೆ. ಇವರುಗಳನ್ನು ಹೊರತುಪಡಿಸಿ ಇನ್ಯಾರು ಇದ್ದಿರಲಿಲ್ಲ. ಸದರಿ ವ್ಯವಹಾರದಲ್ಲಿ ಸಾಕ್ಷಿಯಾಗಿ ನಾನು ಸಹಿ ಮಾಡಿರುತ್ತೇನೆ ಹಾಗು ಭದ್ರತೆಗಾಗಿ ನನ್ನ ಖಾಲಿ ಚೆಕ್ ಹಾಗು ಸಹಿ ಮಾಡಿದ ಛಾಪಾ ಕಾಗದವನ್ನು ನೀಡಿರುತ್ತೇನೆ. ಸದರಿ ಖಾಲಿ ಚೆಕ್ ನ ಜೆರಾಕ್ಸ್ ಪ್ರತಿಯನ್ನು ನಾನು ಇಟ್ಟುಕೊಂಡಿರುವುದಿಲ್ಲ. ಸದರಿ ಹಣಕಾಸಿನ ವ್ಯವಹಾರ ಹೆಚ್.ಡಿ. ಕೋಟೆಯ ಉಪ-ನೋಂದಣಿ ಕಛೇರಿಯ ಬಳಿ ಆಗಿರುತ್ತದೆ. ಸಾಮಾನ್ಯವಾಗಿ ಹಣಕಾಸಿನ ವ್ಯವಹಾರ ನಡೆದಾಗ ಆನ್ ಡಿಮ್ಯಾಂಡ್ ಪ್ರೋ-ನೋಟ್ ಅಥವಾ ಚೆಕ್ ನ ಮೂಲಕ ವ್ಯವಹಾರ ನಡೆಯುತ್ತದೆಂದರೆ ಸರಿ. ಖಾಲಿ ಛಾಪಾ ಕಾಗದವನ್ನು ಸಿದ್ದರಾಮೇಗೌಡ ಹಾಗು ಅವರ ಮಗ ಎನ್.ಎಸ್. ರಾಮು ಪಡೆದುಕೊಂಡಿರುತ್ತಾರೆ. ಆ ರೀತಿ ಸಹಿ ಮಾಡಿದ ಖಾಲಿ ಛಾಪಾ

ಕಾಗದವನ್ನು ಅವರಿಗೆ ನೀಡಿದ ಬಗ್ಗೆ ಯಾವುದೇದಾಖಲೆ ಹಾಜಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ನನ್ನ ಅಣ್ಣ ಕೇಸು ಹಾಕಿದಾಗ ಅದರ ನೋಟೀಸ್ ನಲ್ಲಿ ಆ ವಿಚಾರ ನಮೂದು ಆಗಿರುತ್ತದೆ ಎಂದು ನುಡಿಯುತ್ತಾರೆ. ನಿಮ್ಮ ಅಣ್ಣ ಯಾವ ಕೇಸನ್ನು ಹಾಕಿದ್ದಾರೆಂದು ಕೇಳಲಾಗಿ ಸಾಕ್ಷಿಯು ನನ್ನ ಅಣ್ಣನ ವಿರುದ್ಧ ಎನ್.ಎಸ್. ರಾಮು ಕಡೆಯಿಂದ ಕೇಸು ಹಾಕಿದಾಗ ಅದರ ನೋಟೀಸ್ ನಲ್ಲಿ ಆ ವಿಚಾರ ನಮೂದಾಗಿರುತ್ತದೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಸದರಿ ನೋಟೀಸ್ ಗೆ ನನ್ನ ಅಣ್ಣ ಉತ್ತರ ನೀಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಕೇಸಿನಲ್ಲಾಗಲೀ ಅಥವಾ ನೋಟೀಸ್ ನಲ್ಲಾಗಲೀ ನಾನು ಪಕ್ಷಗಾರನಾಗಿರುವುದಿಲ್ಲ. ಸದರಿ ಕೇಸಿನಲ್ಲಿ ನಿಮ್ಮನ್ನು ಪಕ್ಷಗಾರರನ್ನಾಗಿ ಸೇರಿಸುವಂತೆ ಅರ್ಜಿ ಸಲ್ಲಿಸಲು ತೊಂದರೆ ಇದ್ದಿರಲಿಲ್ಲವೆಂದರೆ ಸಾಕ್ಷಿಯು ತಾನು ಆ ರೀತಿ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲವೆಂದು ನುಡಿಯುತ್ತಾರೆ. ನಾಯಕನಹುಂಡಿ ಗ್ರಾಮದ ಸ.ನಂ. 98/2ರ ಜಮೀನು ಹಾಗು ನನಗೂ ಯಾವುದೇ ಸಂಬಂಧ ಇರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಮೊದಲಿಗೆ ಅಡಮಾನ ಪತ್ರ ಮಾಡುವುದಾಗಿ ತಿಳಿಸಿ ನಂತರ ಕ್ರಯ ಒಪ್ಪಂದ ಕರಾರು ಪತ್ರವನ್ನು ಮಾಡಿಕೊಂಡಿರುವುದಾಗಿ ತಿಳಿಸಿದ್ದು ಆ ಬಗ್ಗೆ ಯಾವುದಾದರೂ ದೂರು ನೀಡಿದ್ದೀರಾ ಎಂದರೆ ಸಾಕ್ಷಿಯು ಆ ರೀತಿ ಯಾವುದೇ ದೂರನ್ನು ನೀಡಿರುವುದಿಲ್ಲವೆಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಅಡಮಾನ ಪತ್ರ ಮಾಡಿದ್ದಲ್ಲಿ ಸ್ಟಾಂಪ್ ಡ್ಯೂಟಿ ಹೆಚ್ಚಾಗುತ್ತದೆ, ವ್ಯವಹಾರ ಮುಗಿದ ನಂತರ ಪತ್ರವನ್ನು ವಾಪಸ್ ಕೊಡುತ್ತೇವೆಂದು

ತಿಳಿಸಿರುತ್ತಾರೆಂದು ನುಡಿಯುತ್ತಾರೆ. ಆ ರೀತಿ ನೋಟೀಸ್ ಕೊಟ್ಟ ನಂತರವೂ ಸಹ ನಾನು ಯಾವುದೇ ದೂರನ್ನು ನೀಡಿರುವುದಿಲ್ಲ. ನಾನು ಸದರಿ ಎಲ್ಲಾ ವಿಚಾರಗಳನ್ನು ಪಿರ್ಯಾದಿಯ ಜೊತೆ ಹಣಕಾಸಿನ ವ್ಯವಹಾರ ಮಾಡಿಕೊಂಡಿರುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ ಪಿರ್ಯಾದುದಾರರ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯಾವಕಾಶವನ್ನು ಕೋರಿದ್ದು, ಸಮಯಾವಕಾಶವನ್ನು ನೀಡಿ ಮುಂದೂಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**